ಅ) ಬಿಳಿಗಿರಿ ರಂಗನ ಬೆಟ್ಟ, ಶಿವನಸಮುದ್ರ ಮತ್ತು ದರ್ಗಾ ಸ್ಥಳಗಳನ್ನು ಪ್ರವಾಸಿ ತಾಣಗಳೆಂದು ಘೋಷಣೆ ಮಾಡಲಾಗಿದೆಯೆ;

ಆ) ಹಾಗಿದ್ದಲ್ಲಿ ಯಾವ ಯಾವ ಸೌಲಭ್ಯಗಳನ್ನು ಒದಗಿಸಲಾಗಿದೆ;

ಇ) ಇಲ್ಲದಿದ್ದಲ್ಲಿ ಪ್ರವಾಸಿ ಕೇಂದ್ರಗಳೆಂದು ಘೋಷಣೆ ಮಾಡಲು ಸರ್ಕಾರ ಕ್ರಮ ಕೈಕೊಳ್ಳುವರೇ?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸ್ಯೋದ್ಯಮ ಮತ್ತು ವಕ್ಫ್ ಸಚಿವರು) :—

ಅ) ಹೌದು

ಆ) ೧. ಬಿಳಿಗಿರಿ ರಂಗನ ಬೆಟ್ಟದಲ್ಲಿ ಉಪಹಾರ ಮಂದಿರವನ್ನು ನಿರ್ಮಿಸಲಾಗಿದೆ.

೨. ಬಿಳಿಗಿರಿ ರಂಗನ ಬೆಟ್ಟದಲ್ಲಿ ಯಾತ್ರಿ ನಿವಾಸವನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

೩. ಶಿವನಸಮುದ್ರದಲ್ಲಿ ಒಂದು ಹೆದ್ದಾರಿ ಸೌಲಭ್ಯವನ್ನು ನಿರ್ಮಿಸಿದ್ದು ಇದನ್ನು ಶೀಘ್ರದಲ್ಲಿ ಪ್ರವಾಸಿಗರಿಗಾಗಿ ತೆರೆಯಲಾಗುವುದು.

ಇ) ಉದ್ಭವಿಸುವುದಿಲ್ಲ.

ಕೊಳ್ಳೇಗಾಲ ಮತ್ತು ಯಳಂದೂರು ತಾಲ್ಲೂಕಿನಲ್ಲಿ ಆನೆಗಳ ಹಾವಳಿ ತಡಹಿಡಿಗಟ್ಟುವುದು.

2246 (2741) ಶ್ರೀ ನಂಜುಂಡಸ್ವಾಮಿ ಜಿ.ಎನ್. (ಕೊಳ್ಳೇಗಾಲ) :— ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಕೊಳ್ಳೇಗಾಲ ಮತ್ತು ಯಳಂದೂರು ತಾಲ್ಲೂಕಿನಲ್ಲಿ ಆನೆಗಳ ಹಾವಳಿಯಿಂದ ರೈತರ ಬೆಳೆ ನಾಶವಾಗುತ್ತಿರುವುದು ಸರ್ಕಾರದ ಗಮನನಕ್ಕೆ ಬಂದಿದೆಯೇ?

2. ಬಂದಿದಲ್ಲಿ ಆನೆಗಳ ಹಾವಳಿ ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಜೆ. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :—

1. ಹೌದು.

2. ಕಾಡಾನೆಗಳ ಹಾವಳಿ ತಡೆಗಟ್ಟಲು ಅರಣ್ಯದ ಅಂಚಿನಲ್ಲಿ ಆನೆ ಕಂದಕ ನಿರ್ಮಿಸಲಾಗಿದ್ದು ಹಾಗೂ ಸೌರ ಶಕ್ತಿ ಬೇಲಿಯನ್ನು ಸೂಕ್ಷ್ಮ ಪ್ರದೇಶಗಳಿಗೆ ಅಳವಡಿಸಿ ರೈತರಿಗೆ ಪಟಾಕಿಗಳನ್ನು ವಿತರಿಸಿ ಸಿಡಿಸುವುದರ ಮೂಲಕ ತಡೆಗಟ್ಟಲಾಗುತ್ತಿದೆ.

ಅಲ್ಲದೆ, ಸಿಬ್ಬಂದಿಯವರಿಂದ ಗಸ್ತು ಕಾಯುವುದನ್ನು ಸಮರ್ಪಕವಾಗಿ ನಿರ್ವಹಿಸಿ ಹಾವಳಿಯನ್ನು ತಡೆಗಟ್ಟುವಲ್ಲಿ ಪರಿಣಾತ್ಮಕ ಕ್ರಮವನ್ನು ಕೈಗೊಳ್ಳಲಾಗುತ್ತಿದೆ. ಇದೂ ಅಲ್ಲದೆ ಆನೆ ಹಾವಳಿಯಿಂದ ಬೆಳೆ ನಾಶ ಪ್ರಕರಣಗಳಲ್ಲಿ ಪರಿಶೀಲಿಸಿ ಪರಿಹಾರ ಧನವನ್ನು ನೀಡಲಾಗಿದೆ.

ಗದಗ ಜಿಲ್ಲೆಯಲ್ಲಿ ಕೈಗೊಂಡಿರುವ ಸೇತುವೆ ಹಾಗೂ ರಸ್ತೆ ಕಾಮಗಾರಿಗಳು.

2247 (2732) ಶ್ರೀ ಪಾಟೀಲ್ ಡಿ.ಆರ್. (ಗದಗ) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ನಬಾರ್ಡ್ ಸಂಸ್ಥೆಯು ಆರ್.ಐ.ಡಿ.ಎಫ್ 2, 3, 4, 5 ಹಾಗೂ 6ರ ಅಡಿಯಲ್ಲಿ ಗದಗ್ ಜಿಲ್ಲೆಯಲ್ಲಿ ಮಂಜೂರಾದ ರಸ್ತೆ ಹಾಗೂ ಸೇತು ಕಾಮಗಾರಿಗಳು ಯಾವುವು? ಅವುಗಳ ಅಂದಾಜು ವೆಚ್ಚ ಎಷ್ಟು; ವಿವರ ನೀಡುವುದು.

2. ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಾಲಮಿತಿ ನಿಗದಿಯಾಗಿದೆಯೇ;

3. ಈ ಕಾಮಗಾರಿಗಳಲ್ಲಿ ಯಾವ ಯಾವ ಕಾಮಗಾರಿಗಳು ಪ್ರಾರಂಭವಾಗಿವೆ ಹಾಗೂ ಯಾವ ಹಂತದಲ್ಲಿವೆ ವಿವರ ನೀಡುವುದು;

4. ಈ ಕಾಮಗಾರಿಗಳಿಗೆ ಈವರೆಗೆ ಮಾಡಲಾಗಿರುವ ವೆಚ್ಚ ಎಷ್ಟು; ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :—

1. ಲೋಕೋಪಯೋಗಿ ಇಲಾಖೆಯಡಿ ಗದಗ್ ಜಿಲ್ಲೆಯಲ್ಲಿ 22.31 ಕೋಟಿ ರೂ. ಮೊತ್ತದ 27 ರಸ್ತೆ ಮತ್ತು 3.47 ಕೋಟಿ ರೂ. ಮೊತ್ತದ 6 ಸೇತುವೆ ಕಾಮಗಾರಿಗಳು ಮಂಜೂರಾಗಿವೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

2. ಹೌದು.

3. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

4. ಈ ಕಾಮಗಾರಿಗಳಿಗೆ ಜೂನ್-2001ರ ಅಂತ್ಯದವರೆಗೆ ಒಟ್ಟಾರೆ ರೂ.1850 ಲಕ್ಷ ವೆಚ್ಚ ಮಾಡಲಾಗಿದ್ದು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.